ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]
ಅಧೀಕ್ಷಕ ಇಂಜನೀಯರ(ವಿ), ರವರ ಕಛೇರಿ,
ರಿ.ಸ.ನಂ : 85ಬ, ಬಿ.ಇ.ಓ/ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರಿ ಆಫೀಸ್ ಹತ್ತಿರ,
ಹಂಚಿನಾಳ ಲೇಔಟ್, ಪೂ.ಬೆಂ. ರಸ್ತೆ, ಹಾವೇರಿ – 581110.

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
O/ O Superintending Engineer(Ele),
Reg No : 85B, Near B.E.O/ Haveri Urban Development Authority Office,
Hanchinal Layout, P.B. Road, Haveri-581110.

Telephone No. : 08375-232632
Fax No. : 08375-232625

Web Site : www.hescom.karnataka.gov.in
E-mail ID : seehvr.hescom@gmail.com
deahaveri@yahoo.com

Corporate Identity (CIN) : U31401KA2002SGC030437.

ಕ್ರಮ ಸಂಖ್ಯೆ : ಹಾ/ಅಇಂ(ವಿ)/ಉಲೆನಿ/ಸಲೆ/ಶಿಆಸ/CR-16/2021-22/ 1846 ದಿನಾಂಕ : 30 JUL 2021

# ಪ್ರಕಟಣೆ [Notification]

## "ಮೈಕ್ರೋ ಫೀಡರ್ ಫ್ರಾಂಚೈಸಿ" ರವರನ್ನು ಗೊತ್ತು ಮಾಡಿಕೊಳ್ಳುವುದು.

ಕಾರ್ಯ & ಪಾಲನಾ ವೃತ್ತ, ಹೆಸ್ಕಾಂ, ಹಾವೇರಿ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ವಿವಿಧ ಗ್ರಾಮ ಪಂಚಾಯಿತಿಗಳಗೆ ಒಬ್ಬರಂತೆ ಮೈಕ್ರೋ ಫೀಡರ್ ಫ್ರಾಂಚೈಸಿಯನ್ನು ಹು.ವಿ.ಸ.ಕಂಪನಿಯು ತನ್ನ ಗ್ರಾಹಕರಿಗೆ ವಿದ್ಯುತ್ ಬಿಲ್ ವಿತರಿಸಿ ಕಂದಾಯ ವಸೂಲಾತಿ ಮಾಡುವುದಕ್ಕೆ ಪ್ರೋತ್ಸಾಹ ಧನ [ಇನಸೆಂಟಿವ್] ಆಧಾರದ ಮೇಲೆ ಗೊತ್ತು ಮಾಡುವುದಕ್ಕೆ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಮೈಕ್ರೋ ಫೀಡರ್ ಫ್ರಾಂಚೈಸಿಯು ಪ್ರತಿ ತಿಂಗಳಿಗೆ ಎಲ್ಲ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹೆಸ್ಕಾಂ, ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ರೂ. 12,000/- [ರೂಪಾಯಿ : ಹನ್ನೆರಡು ಸಾವಿರ ಮಾತ್ರ] ವನ್ನು **"ಕನಿಷ್ಠ ಖಚಿತ ಪ್ರೋತ್ಸಾಹ ಧನ"** ವಾಗಿ ನೀಡಲಾಗುವುದು. ಗ್ರಾಮ ವಿದ್ಯುತ್ ಪ್ರತಿನಿಧಿ/ ಮೈಕ್ರೋ ಫೀಡರ್ ಫ್ರಾಂಚೈಸಿಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ ಸಂಭಾವನೆಯನ್ನು ನೀಡಲಾಗುವುದು.

### "ಮೈಕ್ರೋ ಫೀಡರ್ ಫ್ರಾಂಚೈಸಿ ಸ್ಥಾನಗಳು" ಖಾಲಿ ಇರುವ ಗ್ರಾಮ ಪಂಚಾಯಿತಿಗಳ ವಿವರ

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಉಪ-ವಿಭಾಗದ ಹೆಸರು | ಗ್ರಾಮ ಪಂಚಾಯತಿ ಹೆಸರು |
|---|---|---|---|
| 1 | ಹಾವೇರಿ | ಹಾವೇರಿ | ಕನಕಾಪುರ |
| 2 | | | ಕಬ್ಬೂರ |
| 3 | | | ಬೂದಗಟ್ಟಿ |
| 4 | | | ಮರೋಳ |
| 5 | | ಹಾನಗಲ್ | ಡೊಳ್ಳೇಶ್ವರ |
| 6 | | | ಸಮ್ಮಸಗಿ |
| 7 | | ಸವಣೂರ | ಡಂಬೂರಮತ್ತೂರ |
| 8 | | | ಹುರಳಕುಪ್ಪಿ |
| 9 | ರಾಣೇಬೆನ್ನೂರ | ರಾಣೇಬೆನ್ನೂರ | ಹೊನ್ನತ್ತಿ |
| 10 | | | ವೈ.ಟಿ.ಹೊನ್ನತ್ತಿ |
| 11 | | | ಕೋಟಿಹಾಳ |
| 12 | | ಹಿರೇಕೆರೂರ | ಸುತ್ತಕೋಟಿ |
| 13 | | | ಅಬಲೂರ |
| 14 | | ರಟ್ಟೀಹಳ್ಳಿ | ಚಿಕ್ಕಯಡಚಿ |
| 15 | | ಬ್ಯಾಡಗಿ | ಮತ್ತೂರು |

## I. <u>ಅರ್ಹತೆ</u> :

1. ಮೈಕ್ರೋ ಫೀಡರ್ ಫ್ರಾಂಚೈಸಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಿಸಿದ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ವಾಸ ಸ್ಥಳದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಅಧೀಕೃತ ಅಧಿಕಾರಿಯಿಂದ ಪಡೆದಿರಬೇಕು.
2. ಒಂದು ವೇಳೆ ಯೋಗ್ಯ ಅಭ್ಯರ್ಥಿಯು ಅದೇ ಗ್ರಾಮ ಪಂಚಾಯತಿಯಲ್ಲಿ ದೊರಕದಿದ್ದಲ್ಲಿ ಆ ಗ್ರಾಮ ಪಂಚಾಯತಿಗೆ, ಪಂಚಾಯತಿಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಬೇರೊಂದು ಪಂಚಾಯತಿಯ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.
3. <u>ಅಭ್ಯರ್ಥಿಯ ಕನಿಷ್ಟ ವಿದ್ಯಾರ್ಹತೆ</u> :

   **ಪಿ.ಯು.ಸಿ ದ್ವಿತೀಯ ವರ್ಷ ಪಾಸಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.**

   a) ದ್ವಿತೀಯ ಪಿ.ಯು.ಸಿಯಲ್ಲಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು.

   b) ತತ್ಸಮಾನ ವಿದ್ಯಾರ್ಹತೆಯನ್ನು ದ್ವಿತೀಯ ಪಿ.ಯು.ಸಿಗೆ ತತ್ಸಮಾನ ವಿದ್ಯಾರ್ಹತೆ ಎಂದು ಪರಿಗಣಿಸುವ ಕುರಿತು ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿದ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು.

   c) ಬಾಹ್ಯವಾಗಿ ಪಡೆದಿರುವ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲಾ.
4. <u>ಆಯ್ಕೆ ಪ್ರಕ್ರಿಯೆ</u> :

   1. "ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಪಡೆದಿರುವ ಗರಿಷ್ಠ ಅಂಕಗಳನ್ವಯ ಮೆರಿಟ್ ಆಧಾರದ ಮೇಲೆ ಗೊತ್ತು ಮಾಡಿಕೊಳ್ಳಲಾಗುತ್ತದೆ". ಪ್ರತಿ ಗ್ರಾಮ ಪಂಚಾಯತಿಗೆ 1:2 ರ ಅನುಪಾತದಲ್ಲಿ ಮೂಲ ದಾಖಲಾತಿಗಳ ಪರಿಶೀಲನೆಗಾಗಿ ಕರೆಯಲಾಗುವುದು.
   2. ಮೂಲ ದಾಖಲಾತಿಗಳ ಪರಿಶೀಲನೆ ಮತ್ತು ದೃಢೀಕರಣ.

5. ಅಭ್ಯರ್ಥಿಯು <u>ದಿನಾಂಕ:16.08.2021</u> ಕ್ಕೆ 18 ರಿಂದ 40 ವರ್ಷ ವಯಸ್ಸಿನ ವಯೋಮಿತಿಯಲ್ಲಿರಬೇಕು.
6. ಆಯ್ಕೆಯಾದ ಅಭ್ಯರ್ಥಿಗಳು ದಿನನಿತ್ಯ ವಸೂಲಿ ಮಾಡುತ್ತಿರುವ ಕಂದಾಯ ವಸೂಲಾತಿ ಪ್ರಮಾಣವನ್ನು ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಟ ರೂ. 50,000/- ಅಥವಾ ಗರಿಷ್ಟ 5 ದಿನಗಳ ತಿಂಗಳಿನ ನಿತ್ಯ ಸರಾಸರಿ ಕಂದಾಯ ವಸೂಲಾತಿ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ್ ಖಾತರಿ ಹಣವನ್ನು ನೀಡಬೇಕು.

   a) ಸದರಿ ಬ್ಯಾಂಕ್ ಗ್ಯಾರಂಟಿಯು 12+3=15 ತಿಂಗಳ ಅವಧಿಗೆ ಊರ್ಜಿತದಲ್ಲಿರತಕ್ಕದ್ದು. ಸದರಿ ಬ್ಯಾಂಕ್ ಖಾತರಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಅವಶ್ಯಕತೆಯಂತೆ ವಿಸ್ತರಿಸಬಹುದಾಗಿದೆ.

   b) ಬ್ಯಾಂಕ್ ಖಾತರಿಯನ್ನು/ ವಸೂಲಾದ ಹಣವನ್ನು ದುರುಪಯೋಗ ಪಡಿಸಿಕೊಂಡಲ್ಲಿ ಎಮ್.ಎಫ್.ಎಫ್ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು,

## II. ಆಯ್ಕೆ ಸಮಿತಿಯ ಸದಸ್ಯರು :

ಆಯ್ಕೆ ಸಮಿತಿಯಲ್ಲಿ ಆಯಾ ವೃತ್ತದ ಅಧೀಕ್ಷಕ ಇಂಜನೀಯರ(ವಿ), ಉಪ-ಲೆಕ್ಕನಿಯಂತ್ರಣಾಧಿಕಾರಿಗಳು, ಆಯಾ ವಿಭಾಗಗಳ ಕಾರ್ಯನಿರ್ವಾಹಕ ಇಂಜನೀಯರ(ವಿ), ಲೆಕ್ಕಾಧಿಕಾರಿಗಳು ಮತ್ತು ಆಯಾ ಉಪ-ವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಇರುತ್ತಾರೆ.

## III. ಎಮ್. ಎಫ್. ಎಫ್‌ಗಳ ಕಾನೂನುಬದ್ಧ ಸ್ಥಾನಮಾನ :

1. ಎಮ್. ಎಫ್. ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ಹುವಿಸಕಂನಿಯ ಒಬ್ಬ ಏಜೆಂಟ್ ಆಗಿ ತನ್ನ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ ಮತ್ತು ಯಾವುದೇ ಕಾರಣಕ್ಕೂ ಅಭ್ಯರ್ಥಿಯನ್ನು ಹುವಿಸಕಂನಿಯ ನೌಕರನೆಂದು ಪರಿಗಣಿಸಲಾಗುವುದಿಲ್ಲ.

2. ಎಮ್. ಎಫ್. ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ-ಏಜೆಂಟ್/ ಡೀಲರ್‌ರನ್ನು ನೇಮಕ ಮಾಡಿಕೊಳ್ಳುವಂತಿಲ್ಲ.

## IV. ಮೈಕ್ರೋ ಫೀಡರ್ ಫ್ರಾಂಚೈಸಿಯ ಜವಾಬ್ದಾರಿಗಳು :

1. ಎಲ್.ಟಿ-1, ಎಲ್.ಟಿ-2, ಎಲ್.ಟಿ-3, ಎಲ್.ಟಿ-4[10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು], ಎಲ್.ಟಿ-5[40 ಹೆಚ್.ಪಿ ಸಾಮರ್ಥ್ಯದವರೆಗೆ] ಮತ್ತು ಎಲ್.ಟಿ-6 ಪ್ರವರ್ಗದ ಸ್ಥಾವರಗಳ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಮಾಡುವುದು.

2. ಗ್ರಾಹಕರಿಂದ ವಸೂಲು ಮಾಡಿದ ಹಣವನ್ನು ಅದೇ ದಿನ ಅಥವಾ ನಂತರದ ತಕ್ಷಣದ ಕೆಲಸದ ದಿನಾಂಕದಂದು ನಿಗದಿಪಡಿಸಿರುವ ಹುವಿಸಕಂನಿ ಕಛೇರಿ ಅಥವಾ ನಿಯುಕ್ತಿಗೊಳಿಸಿರುವ ಬ್ಯಾಂಕ್‌ನಲ್ಲಿ ಸಂದಾಯ ಮಾಡತಕ್ಕದ್ದು.

3. ದಿನವಹಿ ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15 ನೇ ದಿನಾಂಕದೊಳಗೆ ಪೂರ್ಣಗೊಳಿಸಬೇಕು ಹಾಗೂ ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಗಣಕಯಂತ್ರ [Computer] ನಲ್ಲಿ ಅಪ್-ಡೇಟ್ ಮಾಡಬೇಕು.

4. ಎಮ್.ಎಫ್.ಎಫ್ ರವರು ತಾವು ನಿಯಮಿತವಾಗಿ ಮಾಡುವ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಕಾರ್ಯಗಳಿಗೆ ಯಾವುದೇ ತೊಂದರೆ/ ಅಡ್ಡಿಯಿಲ್ಲದ ರೀತಿಯಲ್ಲಿ ಗ್ರಾಹಕರ ಸ್ಥಾವರಗಳು, ಫೀಡರ್‌ಗಳು ಮತ್ತು ವಿತರಣಾ ಪರಿವರ್ತಕಗಳಿಗೆ ಮಾಪಕ ಅಳವಡಿಕೆ, ವಿತರಣಾ ಪರಿವರ್ತಕಗಳ ಮಾಪಕ ಓದುವಿಕೆ, ಗ್ರಾಹಕ ಸೂಚ್ಯಂಕ ಹಾಗೂ ಗ್ರಾಹಕರ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆ ಮಾಡುವ ಕಾರ್ಯದಲ್ಲಿ ಹು.ವಿ.ಸ.ಕಂ.ನಿ. ಯೊಂದಿಗೆ ಸಹಕರಿಸುವುದು.

5. ವಿದ್ಯುತ್ ಸರಬರಾಜು ಸಂಬಂಧಿತ ದೂರುಗಳಿದ್ದಲ್ಲಿ, ಗ್ರಾಹಕರಿಗೆ ಸೇವಾ ಕೇಂದ್ರದ ದೂರವಾಣಿ ಸಂಖ್ಯೆಯನ್ನು ನೀಡುವುದು.

6. ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸಹಕರಿಸುವುದು.

7. ಅಪಾಯಕಾರಿ ಸ್ಥಾವರಗಳ ಸ್ಥಳಗಳನ್ನು ಪತ್ತೆ ಹಚ್ಚಲು ಸಹಕರಿಸುವುದು.

8. ಹಳೆಯ/ ಹಾಳಾಗಿರುವ [ಎಮ್.ಎನ್.ಆರ್] ಮಾಪಕಗಳನ್ನು ಗುರುತಿಸಿ, ಉತ್ತಮ ಮಾಪಕಗಳಿಗೆ ಬದಲಾಯಿಸಲು ಅನುಕೂಲವಾಗುವಂತೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವುದು.

9. ಬೀದಿ ದೀಪ ಮತ್ತು ಎಲ್.ಟಿ ಪ್ರವರ್ಗದ ನೀರು ಸರಬರಾಜು ಸ್ಥಾವರಗಳ ಮಾಪಕ ಓದುವುದು ಹಾಗೂ ಬಿಲ್ ವಿತರಿಸುವುದು.

10. ಬೀದಿ ದೀಪ, ನೀರು ಸರಬರಾಜು ಹಾಗೂ ನೀರಾವರಿ ಪಂಪ್ ಸೆಟ್‌ಗಳಿಗೆಂದೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕಗಳ ಓದುವಿಕೆ ಹಾಗೂ ಮಾಪಕ ಓದುವಿಕೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ವರದಿಯನ್ನು ಉಪ-ವಿಭಾಗ ಕಛೇರಿಗೆ ವರದಿ ಮಾಡುವುದು.

11. ತಮಗೆ ಒದಗಿಸಿರುವ ಗುರುತು ಪಟ್ಟಿ/ ಬ್ಯಾಡ್ಜ್ ಧರಿಸಿ ಕಂಪನಿಯ ಕರ್ತವ್ಯ ನಿರ್ವಹಿಸತಕ್ಕದ್ದು. ಈ ಗುರುತು ಪಟ್ಟಿ/ ಬ್ಯಾಡ್ಜ್ ಅನ್ನು ಸುಸ್ಥಿತಿಯಲ್ಲಿ ಇರಿಸಿಕೊಳ್ಳತಕ್ಕದ್ದು. ಈ ನಿಟ್ಟಿನಲ್ಲಿ ಒದಗಿಸಿರುವ ಅವಕಾಶಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗಳು ದುರುಪಯೋಗ ಪಡಿಸಿಕೊಳ್ಳತಕ್ಕದ್ದಲ್ಲ.

12. ಯಾವುದೇ ಕಾರಣಕ್ಕೆ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದಾಗ ಅಂತಹ ಸ್ಥಾವರದ ಮಾಪಕದಲ್ಲಿ ದಾಖಲಾಗಿರುವ ಅಂತಿಮ ರೀಡಿಂಗನ್ನು ಆರ್.ಆರ್ ಸಂಖ್ಯೆ ಅನುಸಾರ ದಾಖಲಿಸಿಕೊಂಡು, ಹುವಿಸಕಂನಿಯು ನಿಗದಿ ಪಡಿಸಿರುವ ನಮೂನೆಯ ಪ್ರಕಾರ ಮಾಹಿತಿಯನ್ನು ಸಲ್ಲಿಸುವುದು.

13. ವಿದ್ಯುತ್ ಸರಬರಾಜು ಕಂಪನಿಯು ಕಾಲ-ಕಾಲಕ್ಕೆ ಪ್ರಕಟಿಸುವ ಸುರಕ್ಷತಾ ವಿಧಾನಗಳ ಕುರಿತು ಸಾಮಾನ್ಯ ಜನತೆಗೆ ಅರಿವು ಮೂಡಿಸುವುದು.

14. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಇಚ್ಚಿಸುವ ಸಾರ್ವಜನಿಕರಿಗೆ ಸೂಕ್ತ ಸಹಾಯ/ ಮಾರ್ಗದರ್ಶನ ನೀಡಿ, ವಿದ್ಯುತ್ ಸಂಪರ್ಕ ಪಡೆಯಲು ಅನುಸರಿಸಬೇಕಾದ ಕಂಪನಿಯ ನಿಯಮಗಳ ಬಗ್ಗೆ ಮಾಹಿತಿ ನೀಡುವುದು.

15. ಹುವಿಸಕಂನಿಯು ಪ್ರತಿ ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಒಂದು ಆಂಡ್ರಾಯ್ಡ್ ಸ್ಮಾರ್ಟ್ ಫೋನ್/ ಸ್ಪಾಟ್ ಬಿಲ್ಲಿಂಗ್ ಮಷಿನ್ [ಎಸ್.ಬಿ.ಎಮ್]/ Optical Cableನ್ನು ಒದಗಿಸುವುದು. ಆಂಡ್ರಾಯ್ಡ್ ಸ್ಮಾರ್ಟ್ ಫೋನ್/ ಸ್ಪಾಟ್ ಬಿಲ್ಲಿಂಗ್ ಮಷೀನನ್ನು Optical Port Cableನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷತೆ ತೋರಿ, ಕಳೆದು ಹೋದಲ್ಲಿ/ ನಿಷ್ಕ್ರಿಯವಾದಲ್ಲಿ ಸಂಪೂರ್ಣ ವೆಚ್ಚ/ ದುರಸ್ತಿ ವೆಚ್ಚವನ್ನು ಸಂಬಂಧಪಟ್ಟ ಎಮ್.ಎಫ್.ಎಫ್ ಭರಿಸಬೇಕು.

16. ಎಮ್.ಎಫ್.ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ-ಏಜೆಂಟ್/ ಡೀಲರ್‌ಗಳನ್ನು ನೇಮಕ ಮಾಡಿಕೊಳ್ಳುವಂತಿಲ್ಲ. ಈ ರೀತಿಯ ನೇಮಕಾತಿ ಮಾಡಿರುವುದು ಗಮನಕ್ಕೆ ಬಂದಲ್ಲಿ ಎಮ್.ಎಫ್.ಎಫ್ ರವರನ್ನು ಯಾವುದೇ ನೋಟಿಸ್ ನೀಡದೇ ಅವರ ನೇಮಕಾತಿಯನ್ನು ರದ್ದು ಪಡಿಸಲಾಗುವುದು.

17. ಎಮ್.ಎಫ್.ಎಫ್ ರವರುಗಳು ಯಾವುದೇ ಸರ್ಕಾರಿ/ ಅರೇ ಸರ್ಕಾರಿ/ ಸ್ಥಳೀಯ ಸಂಸ್ಥೆ/ ರಾಜಕೀಯ ಸಂಸ್ಥೆಗಳಲ್ಲಿ ಯಾವುದೇ ಹುದ್ದೆ/ ಸ್ಥಾನ ಹೊಂದಿರತಕ್ಕದ್ದಲ್ಲ.

18. ಮಾಸಿಕ ಮೂಲ ವಸೂಲಾತಿ ಗುರಿ [Monthly Baseline Collection Target] :-

- ಎಲ್.ಟಿ-1 [40 ಯೂನಿಟ್‌ಗಳಿಗೆ ಮೇಲ್ಪಟ್ಟ ಸ್ಥಾವರಗಳು] ಹಾಗೂ ಎಲ್.ಟಿ-4 [10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು] ಪ್ರವರ್ಗದ ಸ್ಥಾವರಗಳ ಶೇಕಡಾ 50 ರಷ್ಟು ಮಾಸಿಕ ಬೇಡಿಕೆ.
- ಎಲ್.ಟಿ-2, ಎಲ್.ಟಿ-3 ಹಾಗೂ ಎಲ್.ಟಿ-5 [40 ಹೆಚ್.ಪಿ ಸಾಮರ್ಥ್ಯದವರೆಗೆ] ಸ್ಥಾವರಗಳ ಶೇಕಡಾ 100 ರಷ್ಟು ಮಾಸಿಕ ಬೇಡಿಕೆ.

## V. <u>ಕನಿಷ್ಠ ಖಚಿತ ಪ್ರೋತ್ಸಾಹ ಧನ</u> :

1. ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹ ಧನ ನೀಡಲಾಗುವುದು. ಪ್ರತಿ ತಿಂಗಳು ಎಲ್ಲ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿ ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ಮೈಕ್ರೋ ಫೀಡರ್ ಫ್ರಾಂಚೈಸಿಗೆ ರೂ. 12,000/- ನ್ನು "ಕನಿಷ್ಠ ಖಚಿತ ಪ್ರೋತ್ಸಾಹ ಧನ" ವಾಗಿ ನೀಡಲಾಗುವುದು.
2. ಹುವಿಸಕಂನಿಯು ಕಾಲ-ಕಾಲಕ್ಕೆ ನಿಗದಿಪಡಿಸಿದ ಬೇಸ್ ಲೈನ್ ಗುರಿಯ ವಸೂಲಾತಿ ಸಾಧಿಸಿದಲ್ಲಿ ಹೆಚ್ಚುವರಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

[ಅ]. ಎಲ್.ಟಿ-1 [40 ಯೂನಿಟ್ ಗಳಿಗೆ ಮೇಲ್ಪಟ್ಟ ಸ್ಥಾವರಗಳು], ಎಲ್.ಟಿ-2, ಎಲ್.ಟಿ-3, ಎಲ್.ಟಿ-4 [10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು], ಎಲ್.ಟಿ-5, [40 ಹೆಚ್.ಪಿ ಸಾಮರ್ಥ್ಯದವರೆಗೆ] ಸ್ಥಾವರಗಳ ಪ್ರಸಕ್ತ ತಿಂಗಳಿನ ಬೇಡಿಕೆಯ ಶೇಕಡಾ 100 ರಷ್ಟು ವಸೂಲಾತಿ ಮಾಡಿದಲ್ಲಿ ಕನಿಷ್ಠ ಖಚಿತ ಪ್ರೋತ್ಸಾಹ ಧನದ ಜೊತೆಗೆ ರೂ. 2000/-[ರೂಪಾಯಿಗಳು : ಎರಡು ಸಾವಿರ ಮಾತ್ರ] ವನ್ನು ನೀಡಲಾಗುವುದು.

[ಆ]. ಒಪ್ಪಂದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವದಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇಕಡಾ 50 ರಷ್ಟು ವಸೂಲಿ ಮಾಡಿದಲ್ಲಿ ರೂ. 1000/-[ರೂಪಾಯಿ : ಒಂದು ಸಾವಿರ ಮಾತ್ರ] ನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.

[ಇ]. ಒಪ್ಪಂದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇಕಡಾ 50 ರಿಂದ 100 ರವರೆಗೆ ಹೆಚ್ಚು ಮೊತ್ತವನ್ನು ವಸೂಲಿ ಮಾಡಿದಲ್ಲಿ, ರೂ. 1500/-[ರೂಪಾಯಿ : ಒಂದು ಸಾವಿರದಾ ಐನೂರು ಮಾತ್ರ] ನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.

3. ಎಮ್.ಎಫ್.ಎಫ್ ತನ್ನ ವ್ಯಾಪ್ತಿಯಲ್ಲಿನ ಎಲ್ಲ ಗ್ರಾಹಕರ ಅಧಿಕ ಭದ್ರತಾ ಠೇವಣಿ [ಎ.ಎಸ್.ಡಿ] ಯನ್ನು ಮೂರು ತಿಂಗಳಲ್ಲಿ ವಸೂಲಿ ಮಾಡಿದಲ್ಲಿ ರೂ. 500/-[ರೂಪಾಯಿ : ಐದು ನೂರು ಮಾತ್ರ] ನ್ನು ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.

4. ಎಮ್.ಟಿ ವಿಭಾಗ/ ಜಾಗೃತದಳದಿಂದ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಇತರೆ ಯಾವುದೇ ಪರಿಶೋಧಿತ ಕಡಿಮೆ ಬೇಡಿಕೆ [Audit Short Claim] ಯಿಂದಾಗಿ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಸರ್ಕಾರದ ಹೊಂದಾಣಿಕೆಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗೆ ನೀಡಬೇಕಾದ ಪ್ರೋತ್ಸಾಹ ಧನ ಲೆಕ್ಕಾಚಾರಕ್ಕೆ ಪರಿಗಣಿಸಲಾಗುವುದಿಲ್ಲ.

5. ಹೆಚ್ಚುವರಿ ಪ್ರೋತ್ಸಾಹ ಧನವನ್ನು ಲೆಕ್ಕಿಸುವಾಗ ಒಪ್ಪಂದದ ಅವಧಿಯಲ್ಲಿ ಸಂಗ್ರಹಿಸಿರುವ ಬಾಕಿಯನ್ನು ಪರಿಗಣಿಸಲಾಗುವುದಿಲ್ಲ.

6. ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿಯೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕ ಓದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/- ಪಾವತಿಸಲಾಗುವುದು.

7. ಕುಡಿಯುವ ನೀರಿನ ಸ್ಥಾವರಗಳು ಮತ್ತು ಬೀದಿ ದೀಪ ಸ್ಥಾವರಗಳ ಮಾಪಕ ಓದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/- ನ್ನು ಪಾವತಿಸಲಾಗುವುದು.

8. ವಿತರಣಾ ಪರಿವರ್ತಕಗಳಿಗೆ ಮಾಪಕವನ್ನು ಅಳವಡಿಸಿದಲ್ಲಿ, ಕಾರ್ಯ ಸಾಧನೆ ಮಾನದಂಡವನ್ನು Input Energy ಆಧಾರದಲ್ಲಿ ಮಾರ್ಪಾಡು ಮಾಡಲಾಗುವುದು. ಈ ನಿಟ್ಟಿನಲ್ಲಿ ಹುವಿಸಕಂನಿಯು ಕಾರ್ಯಸಾಧನೆ ಅಳತೆ ಹಾಗೂ ಪ್ರೋತ್ಸಾಹ/ ದಂಡ ನೀಡಲು ಸೂಕ್ತ ವಿಧಾನವನ್ನು ರೂಪಿಸುತ್ತದೆ. ಅದರಂತೆ ಪ್ರೋತ್ಸಾಹ ಧನವನ್ನು ನಿಗದಿಪಡಿಸಲಾಗುವುದು.

9. ಮಾಪಕ ಓದುವ ಸಮಯದಲ್ಲಿ ಪತ್ತೆ ಹಚ್ಚುವ ಅನಧಿಕೃತ/ ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಶಾಖಾಧಿಕಾರಿಯವರಿಗೆ ವರದಿ ಮಾಡಿದಲ್ಲಿ ರೂ. 150/- ಪ್ರೋತ್ಸಾಹ ಧನ ನೀಡಲಾಗುವುದು.

10. ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳು ಹಾಗೂ ಕುಡಿಯುವ ನೀರಿನ ಸ್ಥಾವರಗಳನ್ನು ಸಕ್ರಮಗೊಳಿಸಲು ಸಹಕರಿಸಿದಲ್ಲಿ, ಪ್ರತಿ ಸ್ಥಾವರಕ್ಕೆ ರೂ. 100/- ಪ್ರೋತ್ಸಾಹ ಧನ ನೀಡಲಾಗುವುದು.

11. Mobile Cash Collection [MCC] ಮೂಲಕ ಮಾಡುವ "ಪ್ರತಿ" ವ್ಯವಹಾರಕ್ಕೆ ಕೆಳಗಿನಂತೆ ಹೆಚ್ಚುವರಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

[ಅ] ಒಟ್ಟು ಸ್ಥಾವರಗಳಲ್ಲಿ ಶೇಕಡಾ 25 ರಿಂದ 50 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 1.00/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.

[ಆ] ಒಟ್ಟು ಸ್ಥಾವರಗಳಲ್ಲಿ ಶೇಕಡಾ 50 ರಿಂದ 75 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.00/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.

[ಇ] ಒಟ್ಟು ಸ್ಥಾವರಗಳಲ್ಲಿ ಶೇಕಡಾ 75 ರಿಂದ 90 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.50/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.

[ಈ] ಒಟ್ಟು ಸ್ಥಾವರಗಳಲ್ಲಿ ಶೇಕಡಾ 90 ರಷ್ಟಕ್ಕಿಂತ ಮೇಲ್ಪಟ್ಟು ನೀಡಿದ ಪ್ರತಿ ರಶೀದಿಗೆ ರೂ. 3.00/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.

12. ತನ್ನ ಮೂಲ ಗ್ರಾಮ ಪಂಚಾಯತಿಯಿಂದ ಬೇರೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ವರ್ಗಾವಣೆ ಮಾಡಿದಲ್ಲಿ ರೂ. 3000/- ಗಳನ್ನು One Time Payment ರೂಪದಲ್ಲಿ ನೀಡಲಾಗುವುದು.

13. ಕಾರ್ಯನಿರ್ವಹಿಸುವ ಸಮಯದಲ್ಲಿ, ಮಾರಣಾಂತಿಕವಲ್ಲದ [Non-Fatal] ಅಪಘಾತಕ್ಕೊಳಗಾದರೆ, ಮಾನವೀಯತೆಯ ದೃಷ್ಟಿಯಿಂದ ಗರಿಷ್ಠ ರೂ. 5000/-[ರೂಪಾಯಿ : ಐದು ಸಾವಿರಗಳು ಮಾತ್ರ] ಅಥವಾ ವೈದ್ಯಕೀಯ ವೆಚ್ಚ, ಯಾವುದು ಕಡಿಮೆಯೋ ಆ ಮೊತ್ತವನ್ನು ನೀಡಲಾಗುವುದು. ಒಂದು ವೇಳೆ ಮೈಕ್ರೋ ಫೀಡರ್ ಫ್ರಾಂಚೈಸಿಯು ಕಾರ್ಯನಿರ್ವಹಿಸುವ ಸಮಯದಲ್ಲಿ ಅಪಘಾತದಿಂದ ಮರಣ ಹೊಂದಿದರೆ, ರೂ.2,00,000/- [ರೂಪಾಯಿ : ಎರಡು ಲಕ್ಷ ಮಾತ್ರ] ಗಳನ್ನು ಪರಿಹಾರವಾಗಿ ನೀಡಲಾಗುವುದು.

## VI. ದಂಡ :

1. ಮೈಕ್ರೋ ಫೀಡರ್ ಫ್ರಾಂಚೈಸಿಯು ಶೇಕಡಾ 100 ರಷ್ಟು ಬಿಲ್ ವಿತರಿಸದಿದ್ದಲ್ಲಿ ಹಾಗೂ ಕನಿಷ್ಠ ಮೂಲ ವಸೂಲಾತಿ ಗುರಿಯನ್ನು ಸಾಧಿಸದಿದ್ದಲ್ಲಿ ಅವರಿಗೆ ನೀಡುವ ರೂ. 12,000/- ಗಳ "ಕನಿಷ್ಠ ಖಚಿತ ಪ್ರೋತ್ಸಾಹ ಧನ"ದಲ್ಲಿ ಶೇಕಡಾ 5 ರಷ್ಟನ್ನು ದಂಡದ ರೂಪದಲ್ಲಿ ವಿಧಿಸಿ, ಕಡಿತಗೊಳಸಲಾಗುವುದು.
2. ಒಂದು ವೇಳೆ ತಪ್ಪು ರೀಡಿಂಗ್‌ನ್ನು ಸಲ್ಲಿಸಿದಲ್ಲಿ, ಒಪ್ಪಂದವನ್ನು ರದ್ದು ಪಡಿಸಲಾಗುವುದು ಹಾಗೂ ಎಮ್.ಎಫ್.ಎಫ್ ಕೆಲಸದಿಂದ ಕಾರ್ಯವಿಮುಕ್ತಿಗೊಳಸಲಾಗುವುದು.
3. ಮೈಕ್ರೋ ಫೀಡರ್ ಫ್ರಾಂಚೈಸಿಯು ಬೀದಿ ದೀಪ ಹಾಗೂ ಕುಡಿಯುವ ನೀರು ಸರಬರಾಜು ಸ್ಥಾವರಗಳ ಮಾಪಕವನ್ನು ಓದದಿದ್ದಲ್ಲಿ, ಪ್ರತಿ ಸ್ಥಾವರಕ್ಕೆ ರೂ. 20/- [ರೂಪಾಯಿ : ಇಪ್ಪತ್ತು ಮಾತ್ರ] ದಂಡವನ್ನು ವಿಧಿಸಿ, ಎಮ್.ಎಫ್.ಎಫ್ ಗೆ ನೀಡಬೇಕಾದ ಪ್ರೋತ್ಸಾಹ ಧನದಲ್ಲಿ ಕಡಿತಗೊಳಸಲಾಗುವುದು.
4. ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಗಣಕಯಂತ್ರ [Computer] ದಲ್ಲಿ ಅಪ್-ಲೋಡ್ ಮಾಡದಿದ್ದಲ್ಲಿ, ಪ್ರತಿ ದಿನಕ್ಕೆ ರೂ. 10/- ದಂಡವನ್ನು ವಿಧಿಸಲಾಗುವುದು.
5. ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15 ನೇ ದಿನಾಂಕದೊಳಗೆ ಪೂರ್ಣಗೊಳಸದಿದ್ದಲ್ಲಿ, ದಿನಾಂಕ 16 ರಿಂದ ಪ್ರತಿ ದಿನಕ್ಕೆ ರೂ. 100/- ರಂತೆ ದಂಡವನ್ನು ವಿಧಿಸಲಾಗುವುದು.

## VII. ತಿಳುವಳಿಕೆ ಒಡಂಬಡಿಕೆಯನ್ನು ರದ್ದು ಮಾಡುವುದು :

1. ಈ ಒಪ್ಪಂದದ ಅವಧಿಯು ಒಂದು ವರ್ಷದ್ದಾಗಿರುತ್ತದೆ. ಇಂತಹ ಅವಧಿ ಪೂರ್ವ ಒಪ್ಪಂದದ ರದ್ಧತಿಯಿಂದಾಗಿ ಸಂಬಂಧಪಟ್ಟ ಎಮ್.ಎಫ್.ಎಫ್‌ಗೆ ಯಾವುದೇ ಪರಿಹಾರ ನೀಡತಕ್ಕದ್ದಲ್ಲ.
2. ಅಧಿಕ ವ್ಯಾಪ್ತಿಯ ಪ್ರದೇಶದಲ್ಲಿ ಹುವಿಸಕಂನಿಯು ತನ್ನ ಕಾರ್ಯಚರಣೆಯ ಜವಾಬ್ದಾರಿಯನ್ನು ಹೊರಗಿನ ಏಜೆನ್ಸಿಗೆ ಜವಾಬ್ದಾರಿ ವಹಿಸುವ ಪ್ರಕರಣಗಳಲ್ಲಿ ಒಪ್ಪಂದವನ್ನು ರದ್ದು ಪಡಿಸುವುದು.
3. ಗ್ರಾಹಕರಿಂದ ವಸೂಲಿ ಮಾಡಿದ ಹಣವನ್ನು ನಿಗದಿತ ಸಮಯದೊಳಗೆ ಸಂದಾಯ ಮಾಡದಿದ್ದಲ್ಲಿ ಒಪ್ಪಂದ ರದ್ದು ಪಡಿಸಲಾಗುವುದು.
4. ವಸೂಲಾತಿಯಲ್ಲಿ ಸತತ 3 ತಿಂಗಳು ಪ್ರತಿ ತಿಂಗಳ ಕಂದಾಯ ವಸೂಲಾತಿ ಗುರಿ ಮುಟ್ಟಲು ವಿಫಲವಾದರೆ ಒಪ್ಪಂದ ರದ್ದು ಪಡಿಸಲಾಗುವುದು.
5. ಎಮ್.ಎಫ್.ಎಫ್ ರವರು ಈ ಒಪ್ಪಂದದ ಒಡಂಬಡಿಕೆಯಲ್ಲಿನ ಯಾವುದೇ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸಲು ಅಥವಾ ಕಾರ್ಯನಿರ್ವಹಿಸಲು ವಿಫಲರಾದರೆ ಒಡಂಬಡಿಕೆಯನ್ನು ರದ್ದುಗೊಳಸಲಾಗುವುದು.
6. ದುರ್ನಡತೆ ಮತ್ತು ಲಂಚ / ರುಷುವತ್ತುಗಳಲ್ಲಿ ನಿರತನಾಗಿದ್ದರೆ ಒಡಂಬಡಿಕೆಯನ್ನು ರದ್ದುಗೊಳಸಲಾಗುವುದು.
7. ಮೈಕ್ರೋ ಫೀಡರ್ ಫ್ರಾಂಚೈಸಿಯು ಗ್ರಾಹಕರೊಡನೆ ಸೌಜನ್ಯತೆಯಿಂದ ನಡೆದುಕೊಳ್ಳದ ಬಗ್ಗೆ ದೂರುಗಳು ಬಂದರೆ ಒಡಂಬಡಿಕೆಯನ್ನು ರದ್ದುಗೊಳಸಲಾಗುವುದು.

8. ಯಾವುದೇ ಕಾರಣದಿಂದಾಗಿ ಎಮ್.ಎಫ್.ಎಫ್ ನೊಂದಿಗೆ ಒಪ್ಪಂದವು ರದ್ದುಗೊಂಡಲ್ಲಿ, ಹುವಿಸಕಂನಿಗೆ ಸಂಬಂಧಿತ ದಾಖಲೆಗಳು, ಭಾಗಶಃ ಉಪಯೋಗಿಸಿದ/ ಉಪಯೋಗಿಸಿಲ್ಲದ ರಶೀದಿ ಪುಸ್ತಕಗಳು, ನಮೂನೆಗಳು ಹಾಗೂ ಇತರೆ ದಾಖಲಾತಿಗಳನ್ನು ಹುವಿಸಕಂನಿಗೆ ಹಿಂತಿರುಗಿಸತಕ್ಕದ್ದು.

9. ಒಂದು ವೇಳೆ ಎಮ್.ಎಫ್.ಎಫ್ ರವರು ಕಂಪನಿಗೆ ನಷ್ಟ/ ಹಾನಿ ಮಾಡಿದಲ್ಲಿ, ಎಮ್.ಎಫ್.ಎಫ್ ಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳುವುದಲ್ಲದೇ, ಬ್ಯಾಂಕ್ ಖಾತ್ರಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕು ಹೊಂದಿರುತ್ತದೆ.

VIII. <u>ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚನೆ</u> :

ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯೊಂದಿಗೆ ಈ ಕೆಳಗಿನ ದಾಖಲೆ / ವಿವರಗಳನ್ನು ಸಲ್ಲಿಸಬೇಕು.

1. ಅಧಿಕ್ಷಕ ಇಂಜನೀಯರ(ವಿ) ಕಾರ್ಯ & ಪಾಲನಾ ವೃತ್ತ, ಹೆಸ್ಕಾಂ, ಹಾವೇರಿ ಹೆಸರಿನಲ್ಲಿ ರೂ. 250=00 + 45=00 [18% GST] = Rs.295=00 ಗಳ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ / ಪೇ ಆರ್ಡರ್ / ಪೋಸ್ಟಲ್ ಆರ್ಡರ್ [ಹಣ ವಾಪಸ್ಸು ಕೊಡಲಾಗುವುದಿಲ್ಲ] ನ್ನು ಲಗತ್ತಿಸುವುದು. **[Rs. 295/- D.D Should be Issued in the Name Of Superintending Engineer(Ele), O & M Circle, Hescom, Haveri].**
2. ಸಂಬಂಧಿಸಿದ ಗ್ರಾಮ ಪಂಚಾಯತಿಯ ಶಿಫಾರಸ್ಸು ಪ್ರಮಾಣ ಪತ್ರ.
3. ವಿದ್ಯಾರ್ಹತೆಯ ಬಗೆಗೆ ಪ್ರಮಾಣಿತ [ದೃಢೀಕೃತ] ದಸ್ತಾವೇಜುಗಳು.
4. ಅಭ್ಯರ್ಥಿಯ ಆಧಾರ ಕಾರ್ಡನ ದೃಢೀಕೃತ ಪ್ರತಿ ಲಗತ್ತಿಸುವುದು.
5. ಜನ್ಮ ದಿನಾಂಕ ಖಚಿತಪಡಿಸಲು ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳು.
6. 2 ಪಾಸ್ ಪೋರ್ಟ ಅಳತೆಯ ಭಾವ ಚಿತ್ರಗಳು.
7. ಯಾವುದೇ ಮುನ್ಸೂಚನೆ ನೀಡದೇ ಈ ಪ್ರಕಟಣೆಯಲ್ಲಿನ ಎಮ್.ಎಫ್.ಎಫ್ ನೇಮಕಾತಿಯನ್ನು ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿದೆ.
8. ಭರ್ತಿಯಾದ ಅರ್ಜಿಗಳನ್ನು ಮೇಲಿನ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ನೊಂದಾಯಿತ ಅಂಚೆ ಮೂಲಕ/ Speed Post ಮೂಲಕ/ ಮುದ್ದಾಂ ಮೂಲಕ ಕಳುಹಿಸಬೇಕು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ <u>ದಿನಾಂಕ : 16.08.2021 ಸಂಜೆ 5.30 ಗಂಟೆಯ ವರೆಗೆ</u>.
9. ಕೊನೆಯ ದಿನಾಂಕದ ನಂತರ ಮುಟ್ಟಿದ ಹಾಗೂ ಅಪೂರ್ಣ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
10. "ಅರ್ಹ ಅಭ್ಯರ್ಥಿಗಳನ್ನು ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಮೆರಿಟ್ ಆಧಾರದ ಮೂಲಕ ಆಯ್ಕೆ ಮಾಡಲಾಗುವುದು".
11. ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಗೆ ದಿನಾಂಕ : 19.08.2021 ರಂದು ಬೆಳಗ್ಗೆ : 10:00 ಘಂಟೆಗೆ ಈ ಕೆಳಗಿನ ವಿಳಾಸಕ್ಕೆ ಹಾಜರಾಗಲು ತಿಳಸಲಾಗುವುದು.

12. ಈ ಹಿಂದೆ ಎಮ್.ಎಫ್.ಎಫ್ ಗೊತ್ತುಮಾಡಿಕೊಳ್ಳಲು ಪ್ರಕಟಣೆ ಹೊರಡಿಸಲಾದ ಕನಕಾಪುರ, ಡೊಳ್ಳೇಶ್ವರ, ಡಂಬೂರಮತ್ತೂರ, ಹುರಳಿಕುಪ್ಪಿ, ಚಿಕ್ಕಯಡಚಿ ಮತ್ತು ಅಬಲೂರ ಗ್ರಾಮ ಪಂಚಾಯತಿಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಇತರರಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ.

## IX. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿ ದೊರೆಯುವ ಸ್ಥಳ :-

www.hescom.karnataka.gov.in ವೆಬ್‌ಸೈಟ ಅಥವಾ ಈ ಕಛೇರಿ/ ಕಾರ್ಯನಿರ್ವಾಹಕ ಇಂಜನೀಯರ(ವಿ), ಕಾರ್ಯ & ಪಾಲನಾ ವಿಭಾಗ, ಹೆಸ್ಕಾಂ, ಹಾವೇರಿ ಹಾಗೂ ರಾಣೇಬೆನ್ನೂರ ಕಛೇರಿ ಮತ್ತು ಆಯಾ ತಾಲೂಕ ವ್ಯಾಪ್ತಿಯ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ರವರ ಕಾರ್ಯ & ಪಾಲನಾ ಉಪ-ವಿಭಾಗ ಕಛೇರಿ.

- **ಸೂಚನೆ :**

ಈ ಪ್ರಕಟಣೆಯಲ್ಲಿನ ಷರತ್ತು/ ನಿಬಂಧನೆಗಳಿಗೂ ಹಾಗೂ ಒಪ್ಪಂದದ ನಿವೇದನ ಪತ್ರದ ಷರತ್ತು/ ನಿಬಂಧನೆಗಳಿಗೂ ವ್ಯತ್ಯಾಸ ವಿದ್ದಲ್ಲಿ ಒಪ್ಪಂದ ನಿವೇದನ ಪತ್ರದ ಷರತ್ತುಗಳು ಮೇಲುಗೈ ಸಾಧಿಸುತ್ತವೆ [Prevail].

## X. ನೊಂದಣಿ ಅಂಚೆ/ Speed Post/ ಮುದ್ದಾಂ ಮೂಲಕ ಅರ್ಜಿ ಸಲ್ಲಿಸುವ ವಿಳಾಸ :-

| | |
|---|---|
| ಅಧೀಕ್ಷಕ ಇಂಜನೀಯರ(ವಿ),<br>ರಿ.ಸ.ನಂ : 85ಬ, ಬಿ.ಇ.ಓ/ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರಿ ಆಫೀಸ್ ಹತ್ತಿರ,<br>ಹಂಚಿನಾಳ ಲೇಔಟ್, ಪೂ.ಬೆಂ. ರಸ್ತೆ, ಹಾವೇರಿ – 581110. | Superintending Engineer(Ele),<br>Reg No : 85B, Near B.E.O/ Haveri Urban Development Authority Office,<br>Hanchinal Layout, P.B. Road, Haveri-581110. |

ಅಧೀಕ್ಷಕ ಇಂಜನೀಯರ(ವಿ),
ಕಾರ್ಯ & ಪಾಲನಾ ವೃತ್ತ, ಹೆಸ್ಕಾಂ, ಹಾವೇರಿ.

ಪ್ರತಿ : ಕಛೇರಿ ಕಡತ/ ಮಹಾ ಕಡತ.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**["ಮೈಕ್ರೋ ಫೀಡರ್ ಫ್ರಾಂಚೈಸಿ" ರವರನ್ನು ಗೊತ್ತು ಮಾಡಿಕೊಳ್ಳುವುದಕ್ಕೆ ಅರ್ಜಿ]**

**ಅರ್ಜಿ ಶುಲ್ಕ ರೂ. 250.00 + 45.00 [18% GST] = 295.00**

1. ಹೆಸರು : ________________________________
2. ವಾಸಸ್ಥಾನದ ವಿಳಾಸ : ________________________________
3. ಜನ್ಮ ದಿನಾಂಕ : ________________________________
4. ವಿದ್ಯಾರ್ಹತೆ : ________________________________

   ________________________________

   ________________________________
5. ಆಧಾರ ಸಂಖ್ಯೆ : ________________________________
6. ಅರ್ಜಿ ಸಲ್ಲಿಸುವ ಗ್ರಾಮ ಪಂಚಾಯತಿ ಹೆಸರು : ________________________

   ________________________
7. ಬ್ಯಾಂಕಿನ ವಿವರ
   1. ಹೆಸರು : ________________________________
   2. ಮೊತ್ತ : ________________________________
   3. ಡಿ.ಡಿ. ಸಂಖ್ಯೆ ಮತ್ತು ದಿನಾಂಕ : ________________________________
8. ಮೊಬೈಲ್ ಸಂಖ್ಯೆ : ________________________________

ಮೇಲೆ ನಮೂದಿಸಿರುವ ವಿಷಯಗಳು ನನಗೆ ತಿಳಿದ ಮಟ್ಟಿಗೆ ನಿಜವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತೇನೆ. ಒಂದು ವೇಳೆ ಮೈಕ್ರೋ ಫೀಡರ ಫ್ರಾಂಚೈಸಿಯಾಗಿ ಆರಿಸಲ್ಪಟ್ಟರೆ ನಾನು ಆ ಗ್ರಾಮ ಪಂಚಾಯತಿಯಲ್ಲಿ "ದಿನನಿತ್ಯ ವಸೂಲಿ ಮಾಡುತ್ತಿರುವ ಕಂದಾಯ ವಸೂಲಾತಿ ಪ್ರಮಾಣವನ್ನು ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಟ ರೂ. 50,000/- ಅಥವಾ ಗರಿಷ್ಟ 5 ದಿನಗಳ ತಿಂಗಳಿನ ನಿತ್ಯ ಸರಾಸರಿ ಕಂದಾಯ ವಸೂಲಾತಿ ಪ್ರಮಾಣ ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ್ ಖಾತರಿ [ಭರವಸೆ] ಕೊಡಲು/ ಕಂಪನಿಯಲ್ಲಿ ಸಂದಾಯ ಮಾಡಲು ಒಪ್ಪುತ್ತೇನೆ."

ಸ್ಥಳ :

ದಿನಾಂಕ :

**ಅಭ್ಯರ್ಥಿಯ ಸಹಿ.**

**ಅಭ್ಯರ್ಥಿಗಳಿಗೆ ಸೂಚನೆ :**

1. ಇದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಉದ್ಯೋಗ / ನೌಕರಿ / ಕೆಲಸದ / ನೇಮಕಾತಿಯ ಅರ್ಜಿ ಅಲ್ಲ. ಅರ್ಜಿಯ ಜೊತೆಗೆ ಈ ಕೆಳಗೆ ನಮೂದಿಸಿರುವ ಪ್ರಮಾಣ ಪತ್ರಗಳ ಝರಾಕ್ಸ್ ಪ್ರತಿಯನ್ನು ಮಾತ್ರ [ಸ್ವಯಂ ದೃಢೀಕೃತ] ಲಗತ್ತಿಸುವುದು. ಇತ್ತಿಚ್ಚಿನ ಒಂದು ಪಾಸ್‌ಪೋರ್ಟ, ಅಳತೆಯ ಭಾವ ಚಿತ್ರವನ್ನು ಈ ಅರ್ಜಿಗೆ ಅಂಟಿಸಬೇಕು.
   1. ವಿದ್ಯಾರ್ಹತೆಯ ಪ್ರಮಾಣ ಪತ್ರ.
   2. ಸಂಬಂಧಿಸಿದ ಗ್ರಾಮ ಪಂಚಾಯತಿಯ ಶಿಫಾರಸ್ಸು ಪ್ರಮಾಣ ಪತ್ರ.
   3. ಜನ್ಮ ದಿನಾಂಕದ ನಿಖರತೆಗಾಗಿ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ / ವರ್ಗಾವಣೆ ಪ್ರಮಾಣ ಪತ್ರ.
   4. 2 ಪಾಸ್ ಪೋರ್ಟ ಅಳತೆಯ ಭಾವಚಿತ್ರಗಳು.
   5. ಆಧಾರ ಕಾರ್ಡ.
   6. ಚುನಾವಣೆ ಗುರಿತಿನ ಚೀಟಿ.
   7. ಪಾನ್ ಕಾರ್ಡ.
   8. ಪಡಿತರ ವಿತರಣೆ ಗುರುತಿನ ಚೀಟಿ.
2. ಸಂಪೂರ್ಣ ಮಾಹಿತಿಯು ಹೆಸ್ಕಾಂ ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ www.hescom.karnataka.gov.in